7	ಲೋಕೋಪಯೋಗಿ ಇಲಾಖೆ	213
8	ಕೃಷಿ ಇಲಾಖೆ	35
9	ತೋಟಗಾರಿಕೆ ಇಲಾಖೆ	4
10	ಇಂಧನ ಇಲಾಖೆ	2
11	ಜಲಸಂಪನ್ಮೂಲ ಇಲಾಖೆ	31
12	ಪಶುಪಲನಾ ಮತ್ತು ಪಶುವೈದ್ಯ ಸೇವಾ ಇಲಾಖೆ	38
13	ಮೀನುಗಾರಿಕೆ ಇಲಾಖೆ	30
14	ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ	43
15	ಸಮಾಜ ಕಲ್ಯಾಣ ಇಲಾಖೆ	40
16	ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	87
17	ಸಹಕಾರ ಇಲಾಖೆ	132
18	ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ	27
19	ಶಿಕ್ಷಣ ಇಲಾಖೆ	292
20	ಕಂದಾಯ ಇಲಾಖೆ	75
	ಒಟ್ಟು	**7319**

590 ಶ್ರೀ ಸೋಮಲಿಂಗಪ್ಪ ಎಂ.ಎಸ್(ಸಿರಗುಪ್ಪ) : ಮಾನ್ಯ ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯ ಸಿರಗುಪ್ಪ ನಗರದಲ್ಲಿ ಕುಡಿಯುವ ನೀರಿನ ತೀವ್ರ ಅಭಾವವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದಲ್ಲಿ, ಸರ್ಕಾರ ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಕೈಗೊಂಡಿರುವ ಕ್ರಮಗಳೇನು; ಇದಕ್ಕಾಗಿ ರೂಪಿಸಿರುವ ಯೋಜನೆಯೇನು;

ಇ) ಕುಡಿಯುವ ನೀರಿನ ಸಮಸ್ಯೆಯನ್ನು ಬಗೆಹರಿಸಲು ಕೆರೆ ನಿರ್ಮಾಣ ಮಾಡಲು ಈಗಾಗಲೆ ಭೂಮಿಯನ್ನು ಗುರುತಿಸಲಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ಎಸ್. ಸುರೇಶ್‌ಕುಮಾರ್ (ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) :

ಅ) ಬಂದಿದೆ.

ಆ) ಬೇಸಿಗೆಯಲ್ಲಿ ಸಿರುಗುಪ್ಪ ಪಟ್ಟಣದ ನೀರು ಸರಬರಾಜು ಸಮಸ್ಯೆಯನ್ನು ನೀಗಿಸಲು ಜಲಸಂಗ್ರಹಣಾ ಕೆರೆ ನಿರ್ಮಿಸಲು ಉದ್ದೇಶಿಸಲಾಗಿದೆ. ಈಗಾಗಲೇ ಜಲಸಂಗ್ರಹಣಾ ಕೆರೆ ನಿರ್ಮಾಣ ಹಾಗೂ ಇತರ ಸಂಬಂಧಿತ ಕಾಮಗಾರಿಗಳನ್ನೊಳಗೊಂಡ ರೂ.2865.00 ಲಕ್ಷಗಳ ಅಂದಾಜು ಪಟ್ಟಿಯನ್ನು ಮಂಡಳಿಯು ತಯಾರಿಸಿ ಸಲ್ಲಿಸಿದ್ದು, ಆಡಳಿತಾತ್ಮಕ ಅನುಮೋದನೆಗಾಗಿ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಬಂದಿದೆ.

ಈ) ಸಿರಗುಪ್ಪ ಪಟ್ಟಣದ ಹಳೆಕೋಟೆ ಹತ್ತಿರ ಜಲಸಂಗ್ರಹಣಾ ಕೆರೆ ನಿರ್ಮಿಸಲು ಪ್ರಸ್ತಾಪಿಸಲಾಗಿದ್ದು, ಒಟ್ಟು 110 ಎಕರೆ ಜಮೀನಿನ ಅವಶ್ಯಕತೆ ಇರುತ್ತದೆ. ಈಗಾಗಲೆ 19 ಎಕರೆ, ಸರ್ಕಾರಿ ಜಮೀನನ್ನು ಗುರುತಿಸಲಾಗಿದ್ದು, ಜಿಲ್ಲಾಧಿಕಾರಿಗಳು ಬಳ್ಳಾರಿ ಇವರಿಂದ ಸರ್ಕಾರದ ಮಂಜೂರಾತಿಗಾಗಿ ಸಲ್ಲಿಸಲಾಗಿರುತ್ತದೆ. ಉಳಿದ 91 ಎಕರೆ ಜಮೀನಿನ ಭೂ ಸ್ವಾಧೀನ ಪ್ರಕ್ರಿಯೆ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

589 ಶ್ರೀ ಶ್ರೀನಿವಾಸ್ (ವಾಸು)ಎಸ್.ಆರ್.(ಗುಬ್ಬಿ) : ನಗರಾಭಿವೃದ್ಧಿ, ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆ ಗುಬ್ಬಿ ಪಟ್ಟಣಕ್ಕೆ ಯು.ಜಿ.ಡಿ. ಸರ್ವೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;